**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ.**

**ಕ್ರಿ ಮೊ ಸಂಖ್ಯೆ 178/2019**

**ಪಿರ್ಯಾದಿಃ** **ಶ್ರೀ ಟಿ.ಎಂ.ಗಂಗಾಧರಪ್ಪ**

**-ವಿರುದ್ದ-**

**ಆರೋಪಿ/ತರುಃ** **ಶ್ರೀಮತಿ ಯಶೋಧಮ್ಮ.ಹೆಚ್**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿಆರೋಪಿಯ ಹೇಳಿಕೆ**

ಪ್ರಶ್ನೆ-1: ನೀವು ಸಾಕ್ಷಿದಾರರ ಸಾಕ್ಷ್ಯದ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉತ್ತರ: Yes

ಪ್ರಶ್ನೆ-2: ಪಿಡಬ್ಲೂ-1. ಶ್ರೀ ಟಿ.ಎಂ. ಗಂಗಾಧರಪ್ಪ ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ತಮ್ಮ ಕೈಸಾಲ ಹಾಗೂ ಗೃಹಕೃತ್ಯದ ಉದ್ದೇಶಕೋಸ್ಕರ ದಿನಾಂಕ 12.11.2018 ರಂದು ರೂ.8,00,000/- ಗಳನ್ನು ಸಾಲವಾಗಿ ಪಡೆದುಕೊಂಡು, ದಿನಾಂಕ 16.01.2019 ರ ದಿನಾಂಕವನ್ನು ನಮೂದಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತರೀಕೆರೆ ಶಾಖೆಗೆ ಸೇರಿದ ಎರಡು ಚೆಕ್‌ಗಳ ಸಂಖ್ಯೆ 202463 ಮತ್ತು 202469 ನ್ನು ತಲಾ ರೂ.4,00,000/- ದಂತೆ ಒಟ್ಟು ರೂ.8,00,000/- ಗಳಿಗೆ ನೀಡಿದ್ದು, ಸದರಿ ಚೆಕ್ಕುಗಳ ಪೈಕಿ ಚೆಕ್ ಸಂಖ್ಯೆ 202469 ನ್ನು ಪಿರ್ಯಾದಿಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ತರೀಕೆರೆ, ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು ಸದರಿ ಚೆಕ್ಕು ಆರೋಪಿಯಾದ ನಿಮ್ಮ ಖಾತೆಯ '**Funds Insufficient**' ಎಂಬ

ಕಾರಣಕ್ಕಾಗಿ ಅಮಾನ್ಯಗೊಂಡಿದೆ ಎಂದು ಹಿಂಬರಹ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ False

ಪ್ರಶ್ನೆ-3: ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅನಂತರ ಪಿರ್ಯಾದಿಯು ದಿನಾಂಕ 17.01.2019 ರಂದು ವಕೀಲರ ಮೂಲಕ ನೋಟೀಸ್ ನೀಡಿದ್ದು, ಸದರಿ ನೋಟೀಸ್ ಅನ್ನು ಆರೋಪಿಯಾದ ನೀವು ಪಡೆಯದೆ ದಿನಾಂಕ 31.01.2019 ರಂದು ನಿಮಗೆ ನೀಡಿದ ನೋಟೀಸ್ ಪಿರ್ಯಾದುದಾರರಿಗೆ ವಾಪಸ್ಸು ಬಂದಿರುತ್ತದೆ ಮತ್ತು ಆರೋಪಿಯಾದ ನೀವು ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರಃ False

ಪ್ರಶ್ನೆ-4: ಪಿಡಬ್ಲೂ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ವಿಚಾರ ತಿಳಿದಿದ್ದರೂ ಸದರಿ ಚೆಕ್ ನ್ನು ತನಗೆ ನೀಡಿರುತ್ತೀರಿ, ನಂತರ ತಾನು ಆರೋಪಿಯಾದ ನಿಮಗೆ ನೋಟೀಸು ನೀಡಿದರೂ ಸಹ ಆರೋಪಿಯಾದ ನೀವು ಸದರಿ ಸಾಲದ ಹಣವನ್ನು ಹಿಂತಿರುಗಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ ?

ಉತ್ತರ: False

ಪ್ರಶ್ನೆ-5: ನೀವು ಏನಾದರೂ ಹೇಳುವುದಿದೆಯಾ ?

ಉತ್ತರ: Not at this moment

ಪ್ರಶ್ನೆ-6: ಈ ಪ್ರಕರಣದಲ್ಲಿ ನಿಮ್ಮ ಪರ ಸಾಕ್ಷಿ/ಪ್ರತಿರಕ್ಷಣೆ ಏನಾದರೂ ಇದೆಯೇ?

ಉತ್ತರ: Yes

(ಈ ಹೇಳಿಕೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿದ್ದು, ಆರೋಪಿಯ ಉತ್ತರನ್ನು ಯಥಾವತ್ತಾಗಿ ದಾಖಲಿಸಿದ್ದೇನೆ.)

ದಿನಾಂಕ: 19.11.2025

**ಸಹಿ/-**

**(ರಾಹುಲ್ ಶೆಟ್ಟಿಗಾರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ., ತರೀಕೆರೆ.**